ಆ) ಇದರ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಕೈಮಗ್ಗ ನಿಗಮದವರು ಹೊಂದಿರುವ ಕೈಮಗ್ಗಗಳ ಸಂಖ್ಯೆ

149 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕೈಮಗ್ಗ ನಿಗಮದವರು ಹೊಂದಿರುವ ಮಗ್ಗಗಳ ಸಂಖ್ಯೆ ಎಷ್ಟು?

ಆ) ಇದರಲ್ಲಿ ಹತ್ತಿ ಬಟ್ಟೆ, ರೇಷ್ಮೆ ಬಟ್ಟೆ ಹಾಗೂ ಉಣ್ಣೆ ಬಟ್ಟೆ ತಯಾರಿಸುವ ಮಗ್ಗಗಳ ಸಂಖ್ಯೆ ಎಷ್ಟು?

ಇ) ಎಷ್ಟು ಮಗ್ಗಗಳ ಕೆಲಸ ಸ್ಥಗಿತಗೊಳಿಸಿವೆ? ಇದಕ್ಕೆ ಕಾರಣಗಳೇನು?

ಈ) ಇಲ್ಲಿ ಕೆಲಸ ಮಾಡುವ ಉಣ್ಣೆ, ರೇಷ್ಮೆ ಹಾಗೂ ಹತ್ತಿ ಬಟ್ಟೆ ನೇಕಾರರ ಸರಾಸರಿ ಮಾಸಿಕ ಆದಾಯವೆಷ್ಟು?

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ,ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು) :

ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿಯಲ್ಲಿ 22,563 ಕೈಮಗ್ಗಗಳು ಪ್ರಸಕ್ತದಲ್ಲಿ ಕಾರ್ಯ ನಿರತವಾಗಿವೆ.

ಆ) ಹತ್ತಿ ಬಟ್ಟೆ ಮತ್ತು ಪಾಲಿಯೆಸ್ಟರ್ ಬಟ್ಟೆ

ತಯಾರಿಸುವ ಮಗ್ಗಗಳು	20,100
ರೇಷ್ಮೆ ಬಟ್ಟೆ ತಯಾರಿಸುವ ಮಗ್ಗಗಳು	2,362
ಉಣ್ಣೆ ಬಟ್ಟೆ ತಯಾರಿಸುವ ಮಗ್ಗಗಳು	101
ಒಟ್ಟು	**22,563**

ಇ) ಈಗ ಕೆಲಸ ಸ್ಥಗಿತಗೊಂಡಿರುವ ಮಗ್ಗಗಳ ಸಂಖ್ಯೆ ಈ ಕೆಳಕಂಡಂತಿದೆ :

1)	ಹತ್ತಿ ಮಗ್ಗಗಳು	3,510
2)	ರೇಷ್ಮೆ ಮಗ್ಗಗಳು	568
3)	ಉಣ್ಣೆ ಮಗ್ಗಗಳು	41
	ಒಟ್ಟು	**4,119**

ಕಾರಣಗಳು :

1) ಶಿಕ್ಷಣ ಇಲಾಖೆಯ ವಿದ್ಯಾವಿಕಾಸ ಯೋಜನೆಯಲ್ಲಿ ನಿಗಮವು ಸರಬರಾಜು ಮಾಡಬೇಕಾಗಿರುವ ಸಮವಸ್ತ್ರದ ಪ್ರಮಾಣವನ್ನು ಕಡಿತಗೊಳಿಸಿರುವುದರಿಂದ ಹಾಗೂ 1996-97ನೇ ಸಾಲಿಗೆ ಈ ಯೋಜನೆಯನ್ನು ಮುಂದುವರೆಸುವ ಬಗ್ಗೆ ಆದೇಶವನ್ನು ಹೊರಡಿಸದೇ ಇರುವುದರಿಂದ.

2) ರಾಜ್ಯದ ಸಹಕಾರಿ ನೂಲಿನ ಗಿರಣಿಗಳು ಅವಶ್ಯಕತೆಗೆ ಅನುಗುಣವಾಗಿ ಪೂರ್ಣ ಪ್ರಮಾಣದಲ್ಲಿ ನೂಲು ಸರಬರಾಜು ಮಾಡದೇ ಇರುವುದರಿಂದ

ಈ) ಉಣ್ಣೆ ಬಟ್ಟೆ ನೇಕಾರರ ಸರಾಸರಿ

ಮಾಸಿಕ ಆದಾಯ	ರೂ.	500.00
ರೇಷ್ಮೆ ಬಟ್ಟೆ ನೇಕಾರರ ಸರಾಸರಿ	ರೂ.	900.00 ರಿಂದ
ಮಾಸಿಕ ಆದಾಯ	ರೂ.	2000.00 ರವರೆಗೆ
ಹತ್ತಿಬಟ್ಟೆ ನೇಕಾರರ ಸರಾಸರಿ	ರೂ.	700.00 ರಿಂದ
ಮಾಸಿಕ ಆದಾಯ	ರೂ.	1500.00 ರವರೆಗೆ

ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆ ಘಟಕಗಳ ಸಂಖ್ಯೆ

150 - ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಸಣ್ಣ ಕೈಗಾರಿಕೆ ಘಟಕಗಳಿವೆ?

ಆ) ಈ ಸಣ್ಣ ಕೈಗಾರಿಕಾ ಘಟಕಗಳಲ್ಲಿ ರಾಜ್ಯ ಸರ್ಕಾರದವರು ಹೂಡಲಾಗಿರುವ ಒಟ್ಟು ಬಂಡವಾಳ ಎಷ್ಟು?

ಈ) ಈ ರೋಗಗ್ರಸ್ಥ ಹಾಗೂ ಸ್ಥಗಿತ ಗೊಂಡಿರುವ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರದವರು ವಿಶೇಷ ಯೋಜನೆಯನ್ನೇನಾದರೂ ರೂಪಿಸಲಾಗಿರುವರೇ, ಹಾಗಿದ್ದಲ್ಲಿ ವಿವರ ನೀಡುವುದು?

ಶ್ರೀ ಎನ್.ಎಂ. ನಬೀ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ದಿನಾಂಕ 31-3-95ಕ್ಕೆ ರಾಜ್ಯದಲ್ಲಿ ಒಟ್ಟು 1,63,521 ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿರುತ್ತವೆ.

ಆ) ಸಂಬಂಧಪಟ್ಟ ಪ್ರಧಾನ ವ್ಯವಸ್ಥಾಪಕರುಗಳಿಂದ ಮಾಹಿತಿಯನ್ನು ಕೋರಿದ್ದು, ಬಂದ ಕೂಡಲೇ ಮಾಹಿತಿಯನ್ನು ಒದಿಗಸಲಾಗುವುದು.